ವಿಷಯ:- ಮಾಗಡಿಯಲ್ಲಿ ಕೆಂಪೇಗೌಡ ಉತ್ಸವ.

104(364)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಪ್ರತಿ ಜಿಲ್ಲೆಗೊಂದು ಉತ್ಸವ ನಡೆಸುವ ಸಂಬಂಧ ನೀತಿಯಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿಯಲ್ಲಿ ''ಕೆಂಪೇಗೌಡ ಉತ್ಸವ''ವನ್ನು ಜಿಲ್ಲಾ ಮಟ್ಟದ ಉತ್ಸವವನ್ನಾಗಿ ಆಚರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮತ್ತು ಯಾವ ಇಲಾಖೆಗಳ ಸಹಕಾರದಿಂದ ಆಚರಿಸಲಾಗುವುದು. ಹಾಗೂ ಉತ್ಸವದ ಸ್ವರೂಪದ ಬಗ್ಗೆ ವಿವರ ನೀಡುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಪ್ರಸಕ್ತ ಹಣಕಾಸಿನ ಸಾಲಿನಲ್ಲಿ, ಈ ಉತ್ಸವವನ್ನು ಆಚರಿಸಲು ಯೋಚಿಸಿಲ್ಲ. 1997-98ನೇ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲೂ ''ಜಿಲ್ಲಾ ಉತ್ಸವ''ವನ್ನು ಆಚರಿಸಲು ಸರ್ಕಾರವು ಯೋಜಿಸಿದೆ. ಆಗ ಈ ಉತ್ಸವ ನಡೆಸುವುದನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡಲಾಗುವುದು.

ಆ) ಮೇಲೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ರಾಜ್ಯದಲ್ಲಿ ಯುವಜನ ಸೇವಾ ಮತ್ತು ಕ್ರೀಡೆಗಳಿಗೆ ಪ್ರೋತ್ಸಾಹ.

106(366)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಯುವಜನರ ಸರ್ವಾಂಗೀಣ ಪ್ರತಿಭೆಗೆ ಪ್ರೋತ್ಸಾಹ ನೀಡಲು ಕ್ರೀಡೆಗಳಲ್ಲಿ ಆಸಕ್ತಿ ಹೆಚ್ಚಿಸಲು ಸರ್ಕಾರವು ಹಮ್ಮಿಕೊಂಡಿರುವ ವಿವಿಧ ಯೋಜನೆಗಳು, ಕಾರ್ಯಕ್ರಮಗಳು ಪ್ರೋತ್ಸಾಹಗಳು ಚಟುವಟಿಕೆಗಳ ಬಗ್ಗೆ ಸಂಪೂರ್ಣ ವಿವರ ನೀಡುವುದು;

ಆ) ಈ ಯೋಜನೆಗಳ ಕಾರ್ಯಕ್ರಮಗಳ ಪ್ರಯೋಜನೆಗಳನ್ನು ಪಡೆಯಲು ಇರುವ ಅರ್ಹತೆಗಳೇನು; ಕ್ರೀಡಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಾಯ ಧನ ನೀಡಲಾಗುವುದೇ; ಹಾಗಿದ್ದಲ್ಲಿ ನೀಡಲಾಗುವ ಸಹಾಯಧನದ ಪ್ರಮಾಣವೆಷ್ಟು? ಸಹಾಯಧನ ಪಡೆಯಲು ಸಂಘ ಸಂಸ್ಥೆಗಳಿಗೆ ಇರಬೇಕಾದ ಅರ್ಹತೆಗಳೇನು? (ಸಂಪೂರ್ಣ ವಿವರ ನೀಡುವುದು)?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):-

ಅ) ಯುವಜನ ಕಾರ್ಯಕ್ರಮಗಳ ಕುರಿತು ರಾಜ್ಯದಲ್ಲಿ ಯುವಜನ ಸರ್ವಾಂಗೀಣ ಪ್ರತಿಭೆಗೆ ಪ್ರೋತ್ಸಾಹ ನೀಡಲು ಇಲಾಖೆಯಲ್ಲಿ ಕೆಳಕಂಡ ಯೋಜನೆಗಳನ್ನು ಹಾಗೂ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

1. ಯುವಜನ ಮೇಳಗಳು

ಕರ್ನಾಟಕ ಗ್ರಾಮೀಣ ಪ್ರದೇಶದಲ್ಲಿರುವ ಯುವಕ ಯುವತಿಯರ ಸಾಂಸ್ಕೃತಿಕ ಹಾಗೂ ಜಾನಪದ ಪ್ರತಿಭೆಯನ್ನು ಪ್ರೋತ್ಸಾಹಿಸಲು ಮೇಳಗಳನ್ನು ಪ್ರತಿ ವರ್ಷವೂ ತಾಲ್ಲೂಕು ಜಿಲ್ಲಾ ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ವ್ಯವಸ್ಥೆ ಮಾಡಿ ಏರ್ಪಡಿಸಲಾಗುತ್ತದೆ. ಈ ಮೇಳಗಳಲ್ಲಿ ಯುವಕ ಯುವತಿಯರಿಗಾಗಿ ಗೀಗೀ ಪದ ಜಾನಪದ ನೃತ್ಯ ಸುಗ್ಗಿ ಕುಣಿತ ಕೋಲಾಟ, ಡೊಳ್ಳು ಕುಣಿತ ವೀರಗಾಸೆ ಕುಣಿತ ಲಾವಣಿ ಭಾವಗೀತೆ ಯಕ್ಷಗಾನ ದೊಡ್ಡಾಟ ಬಯಲಾಟ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ.

2. ರಾಷ್ಟ್ರೀಯ ಸೇವಾ ಯೋಜನೆ

ವಿದ್ಯಾರ್ಥಿ ಯುವಜನರಲ್ಲಿ ಸಮುದಾಯ ಸೇವೆಯ ಮೂಲಕ ವ್ಯಕ್ತಿತ್ವದ ಬೆಳವಣಿಗೆಯನ್ನು ಮಾಡುವ ಉದ್ದೇಶದಿಂದ ಈ ಯೋಜನೆಯನ್ನು 1969ರಲ್ಲಿ ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ರಸ್ತೆಗಳ ನಿರ್ಮಾಣ ನೈರ್ಮಲ್ಯೀಕರಣ, ಗಿಡಮರಗಳನ್ನು ಬೆಳೆಸುವುದು ವಯಸ್ಕರ ಶಿಕ್ಷಣ ರಾಷ್ಟ್ರೀಯ ಭಾವೈಕ್ಯತೆ ಮುಂತಾದ ಉನ್ನತ ಧ್ಯೇಯೋದ್ದೇಶಗಳನ್ನು ಹಮ್ಮಿಕೊಂಡಿರುವ ಈ ಯೋಜನೆಗಳಲ್ಲಿ ವಿದ್ಯಾರ್ಥಿಗಳನ್ನು ಭಾಗವಹಿಸಲು ಪ್ರೋತ್ಸಾಹಿಸಲಾಗಿದೆ. 60,000 ವಿದ್ಯಾರ್ಥಿಗಳನ್ನು ರೆಗ್ಯುಲರ್ ಎನ್ ಎಸ್ ಎಸ್‌ನಲ್ಲಿ ಮತ್ತು 2000 ವಿದ್ಯಾರ್ಥಿ:ವಿದ್ಯಾರ್ಥಿಯರನ್ನು ವಿಶೇಷ ಈ ಶಿಬಿರಗಳಲ್ಲಿ ತೊಡಗಿಸಲಾಗಿದೆ.

3. ಕರ್ನಾಟಕ ಅಭಿವೃದ್ಧಿ ದಳ

ಈ ಯೋಜನೆ ಮೇರೆಗೆ 35 ವರ್ಷಕ್ಕಿಂತ ಕಡಿಮೆ ಇರುವ ನಿರುದ್ಯೋಗಿ ಪದವೀದರರಿಗೆ ಮಾಸಿಕ ರೂ. 500.00 ಗೌರವ ಧನವನ್ನು ನೀಡುವ ಮೂಲಕ ಕರ್ನಾಟಕ ಯುವಜನ ಸ್ವಯಂ ಸೇವಕರಾಗಿ ನೇಮಕಾತಿ ಮಾಡಿ ರಾಜ್ಯದ ಕ್ಷೇತ್ರವಲಯಗಳಲ್ಲಿ ಕೆಲಸ ನಿರ್ವಹಿಸಲು ಆದೇಶಿಸಲಾಗಿದೆ.

4. ರಾಜ್ಯ ಹಾಗೂ ರಾಷ್ಟ್ರೀಯ ಯುವ ಪ್ರಶಸ್ತಿ

ಯುವಜನರಲ್ಲಿರುವ ಅಸಾಧಾರಣ ಪ್ರತಿಭೆ ಹಾಗೂ ಗಣನೀಯವಾಗಿ ಸಲ್ಲಿಸಿರುವ ಸಮಾಜ ಸೇವೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಪ್ರತಿ ವರ್ಷವೂ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

5. ಯುವ ತರಬೇತಿ ಕಾರ್ಯಕ್ರಮಗಳು

ಯುವಜನರಲ್ಲಿ ವ್ಯಕ್ತಿತ್ವ ವಿಕಸನ, ಪರಿಣಾಮಕಾರಿ ನಾಯಕತ್ವದ ಬೆಳೆವಣಿಗೆ, ಗ್ರಾಮೀಣ ಅಭಿವೃದ್ಧಿ ಹಾಗೂ ಸಮಾಜ ಸೇವೆಯಲ್ಲಿ ಕಾರ್ಯಚರಣೆ ಮಾಡಲು ಬೇಕಾಗಿರುವ ಎಲ್ಲಾ ವಿಷಯಗಳಲ್ಲಿ ತರಬೇತಿ ನೀಡಲು ಯುವಜನರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ.

ಕ್ರೀಡಾ ಕಾರ್ಯಕ್ರಮಗಳ ಕುರಿತು

ಕ್ರೀಡೆಗಳಲ್ಲಿ ಆಸಕ್ತಿ ಹೆಚ್ಚಿಸಲು ಸರ್ಕಾರವು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಮುಖಾಂತರ ಕ್ರೀಡಾ ಶಾಲೆ ಕ್ರೀಡಾ ನಿಲಯಗಳನ್ನು ಪ್ರಾರಂಭಿಸಿ ರಾಜ್ಯದಲ್ಲಿನ ಕ್ರೀಡಾ ಪ್ರತಿಭೆಗಳನ್ನು

ಗುರುತಿಸಿ, ಕ್ರೀಡಾ ಶಾಲೆ ಕ್ರೀಡಾ ನಿಲಯಗಳಿಗೆ ಪ್ರವೇಶ ನೀಡಿ ಉಚಿತವಾಗಿ ಸೌಲಭ್ಯಗಳನ್ನು ಒದಗಿಸಿಕೊಟ್ಟು ವೈಜ್ಞಾನಿಕ ಕ್ರೀಡಾ ತರಬೇತಿಯನ್ನು ನೀಡಲಾಗುತ್ತಿದೆ. ರಾಷ್ಟ್ರ ಹಾಗೂ ಅಂತರ್ ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವುದು ಈ ಯೋಜನೆಯ ಗುರಿಯಾಗಿರುತ್ತದೆ. ವಿವಿಧ ತಾಲ್ಲೂಕು ಜಿಲ್ಲೆಗಳಿಲ್ಲದೆ ರಾಜ್ಯ ಮಟ್ಟದಲ್ಲೂ ಸಹ ತರಬೇತಿದಾರರನ್ನು ನೇಮಿಸಿ ವಿವಿಧ ಕ್ರೀಡೆಗಳಲ್ಲಿ ಆಸಕ್ತಿ ಕ್ರೀಡಾಪಟುಗಳಿಗೆ ತರಬೇತಿ ನೀಡಲಾಗುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಾಣ ಯೋಜನೆಯನ್ನು ಹಮ್ಮಿಕೊಂಡಿದ್ದು ವಿವಿಧ ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯವು ವಿವಿಧ ಹಂತದಲ್ಲಿದೆ. ಹಾಗೂ ಸ್ಥಳೀಯವಾಗಿ ಪ್ರಚಲಿತವಿರುವ ಕ್ರೀಡೆಗಳಲ್ಲಿ ತರಬೇತಿಯನ್ನು ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮಗಳು

1. ಗ್ರಾಮೀಣ ಹಾಗೂ ಮಹಿಳಾ ಕ್ರೀಡಾಕೂಟ, ಹಿರಿಯ ಮತ್ತು ಕಿರಿಯರಿಗೆ ದಸರಾ ಕ್ರೀಡಾ ಕೂಟವನ್ನು ತಾಲ್ಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೂ (ಬಾಲಕ: ಬಾಲಕಿಯರಿಗೆ) ನಡೆಸಲಾಗುವುದು. ಗ್ರಾಮೀಣ ಮತ್ತು ಮಹಿಳಾ ದಸರಾ ಕ್ರೀಡಾ-ಕೂಟಗಳಲ್ಲಿ ಸ್ಪರ್ಧೆಗಳನ್ನು ನಡೆಸಿ ಆಯ್ಕೆಯಾದ ಅತ್ಯುತ್ತಮ ಕ್ರೀಡಾ ಸ್ಪರ್ಧೆಗಳನ್ನು ರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಿಗೆ ಕಳುಹಿಸಿ ಕೊಡಲಾಗುತ್ತಿದೆ.
2. ತಾಲ್ಲೂಕು ಮಂಡಲ, ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿ ಕ್ರೀಡಾ ಬೇಸಿಗೆ ತರಬೇತಿ ಶಿಬಿರವನ್ನು ಹಾಗೂ ಇತರ ರಜಾ ದಿವಸಗಳಲ್ಲಿ ವಿಶೇಷ ತರಬೇತಿ ಶಿಬಿರವನ್ನು ಏರ್ಪಡಿಸಿ ಪ್ರೋತ್ಸಾಹಿಸಲಾಗುತ್ತಿದೆ.
3. ಗ್ರಾಮೀಣ ಪ್ರದೇಶದಲ್ಲಿ ಕ್ರೀಡಾ ಪ್ರೋತ್ಸಾಹಕ್ಕಾಗಿ ಜಿಲ್ಲಾ ಪಂಚಾಯತ್ ವತಿಯಿಂದ ಆಯ್ದು ಮಂಡಲ ತಾಲ್ಲೂಕು ಜಿಲ್ಲಾ ಮಟ್ಟಗಳಲ್ಲಿ ಪ್ರಚಲಿತವಿರುವ ಕ್ರೀಡೆಗಳನ್ನು ಗುರುತಿಸಿ ಇಲಾಖಾ ತರಬೇತುದಾರರಿಂದ ವೈಜ್ಞಾನಿಕ ಕ್ರೀಡಾ ತರಬೇತಿದಾರರಿಂದ ವೈಜ್ಞಾನಿಕ ಕ್ರೀಡಾ ತರಬೇತಿಯನ್ನು ನೀಡಲಾಗುತ್ತದೆ.
4. ಮಾನ್ಯತೆ ಪಡೆದ ವಿವಿಧ ಕ್ರೀಡೆಗಳ ರಾಜ್ಯ ಸಂಸ್ಥೆಗಳ ಮೂಲಕ ಸಂಬಂಧಿಸಿದ ಕ್ರೀಡೆಗಳ ರಾಜ್ಯ ಸಂಸ್ಥೆಗಳ ಮೂಲಕ ಸಂಬಂಧಿಸಿದ ಕ್ರೀಡೆಗಳ ರಾಜ್ಯ ಮಟ್ಟ, ವಲಯ ಮಟ್ಟ ಅಂತರ್ ವಲಯ ಫೆಡರೇಷನ್ ಕಪ್ ಸ್ಪರ್ಧೆಗಳು ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳನ್ನು ಸಂಘಟಿಸಲು ಹಾಗೂ ಅವುಗಳಲ್ಲಿ ರಾಜ್ಯ ತಂಡ ಭಾಗವಹಿಸಲು ಧನಸಹಾಯ ಒದಗಿಸಲಾಗುತ್ತಿದೆ.

ಪ್ರೋತ್ಸಾಹಗಳು

ಕ್ರೀಡೆಗಳಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳಿಗೆ ಈ ಕೆಳಕಾಣಿಸಿದ ಪ್ರೋತ್ಸಾಹವನ್ನು ನೀಡಲಾಗುತ್ತದೆ.

1. ಮಾಧ್ಯಮಿಕ ಹಾಗೂ ಪ್ರೌಢಶಾಲಾ ಕ್ರೀಡಾಪಟುಗಳಿಗೆ ಸ್ಕಾಲರ್‌ಶಿಪ್ ನೀಡಲಾಗುತ್ತದೆ.

2. ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ವಿದ್ಯಾಭ್ಯಾಸಕ್ಕಾಗಿ ಕ್ರೀಡಾ ಆಧಾರಿತ ಮೀಸಲು ಸ್ಥಾನವನ್ನು ಕಾಯ್ದಿರಿಸಿ ಇಲಾಖೆಯ ಗುಣಾಂಕಗಳ ಪ್ರಕಾರ ಪ್ರವೇಶ ದೊರಕಿಸಲಾಗುವುದು (ತಾಂತ್ರಿಕ, ಪಾಲಿಟೆಕ್ನಿಕ್, ಡೆಂಟಲ್ ವೈದ್ಯಕೀಯ)

3. ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾ-ಪಟುಗಳಿಗೆ ವಾರ್ಷಿಕವಾಗಿ ನಗದು ಬಹುಮಾನ ನೀಡಲಾಗುವುದು.

4. ಕ್ರೀಡೆಗಳಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳಿಗೆ ದಸರಾ ಪ್ರಶಸ್ತಿಯನ್ನು ನೀಡಲಾಗುವುದು.

5. ಕರ್ನಾಟಕ ರಾಜ್ಯದ ಅತ್ಯುತ್ತಮ ಪ್ರೋತ್ಸಾಹ ಪ್ರಶಸ್ತಿ, ಏಕಲವ್ಯ ಪ್ರಶಸ್ತಿಯನ್ನು ಕ್ರೀಡಾ ಕ್ಷೇತ್ರದಲ್ಲಿ (ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರ) ಮಟ್ಟದಲ್ಲಿ ಅತ್ಯುತ್ತಮ ಸಾಧನೆಗಾಗಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

6. ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟು-ಗಳಿಗೆ ಸರ್ಕಾರದ ವತಿಯಿಂದ ನಿವೇಶನಗಳನ್ನು ಆಧ್ಯತೆ ಮೇಲೆ ವಿತರಿಸಲು ಶಿಫಾರಸ್ಸು ಮಾಡಲಾಗುತ್ತಿದೆ.

7. ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿ ಕಷ್ಟ ಪರಿಸ್ಥಿತಿಯಲ್ಲಿರುವ 50 ವರ್ಷಕ್ಕಿಂತ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಮಾಸಾಶನ ನೀಡಲಾಗುತ್ತಿದೆ.

ಆ) 1. ಯುವಜನ ಶಿಬಿರಗಳು ಮತ್ತು ಮೇಳಗಳು

ಯುವಜನ ಮೇಳದಲ್ಲಿ ಭಾಗವಹಿಸಲು ಯುವಕ ಯುವತಿಯರು ಸಂಘದ ಸದಸ್ಯ-ರಾಗಿರಬೇಕು. ಹಾಗೂ 18 ರಿಂದ 35 ವರ್ಷ ವಯಸ್ಸಿನವರಾಗಿರಬೇಕು.

2. ರಾಷ್ಟ್ರೀಯ ಸೇವಾ ಯೋಜನೆ

ರಾಷ್ಟ್ರೀಯ ಸೇವಾ ಯೋಜನೆಯಡಿ ಭಾಗವಹಿಸುವ ಯುವಕ:ಯುವತಿಯರು ಕಾಲೇಜಿನ ವಿದ್ಯಾರ್ಥಿಗಳಾಗಿರಬೇಕು.

3. ಕರ್ನಾಟಕ ಅಭಿವೃದ್ಧಿ ದಳ

ಈ ಯೋಜನೆಯಡಿ ಸ್ವಯಂ ಸೇವಕರಾಗಿ ನೇಮಕಾತಿಯಾಗುವ ಯುವಕ:ಯುವತಿಯರು ನಿರುದ್ಯೋಗಿ ಪದವೀದರರಾಗಿರಬೇಕು ಹಾಗೂ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.

4. ರಾಜ್ಯ ಹಾಗೂ ರಾಷ್ಟ್ರೀಯ ಯುವ ಪ್ರಶಸ್ತಿ.

ರಾಜ್ಯ ಹಾಗೂ ರಾಷ್ಟ್ರೀಯ ಯುವ ಪ್ರಶಸ್ತಿಗೆ ಅರ್ಹರಾಗಿರುವ ಯುವಕ:ಯುವತಿಯರು ಸಂಘದ ಸದಸ್ಯರಾಗಿರಬೇಕು. ಹಾಗೂ 18 ರಿಂದ 35 ವರ್ಷ ವಯಸ್ಸಿನವರಾಗಿರಬೇಕು.

5. ಯುವ ತರಬೇತಿ ಕಾರ್ಯಕ್ರಮ

ಯುವ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಯುವಕ:ಯುವತಿಯರು ಸಂಘದ ಸದಸ್ಯರಾಗಿರಬೇಕು ಹಾಗೂ 15 ರಿಂದ 35 ವರ್ಷ ಒಳಪಟ್ಟಿರಬೇಕು. ಭಾಗವಹಿಸುವ ಯುವಕ:ಯುವತಿಯರು ಎಸ್.ಎಸ್.ಎಲ್.ಸಿ.ವರೆಗೆ ಓದಿರಬೇಕು ಪರಿಶಿಷ್ಟಜಾತಿ ಪಂಗಡ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ಕ್ರೀಡಾ ಶಾಲೆ: ಕ್ರೀಡಾ ನಿಲಯಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕಿರಿಯರ ವಿಭಾಗದಲ್ಲಿ ಬಾಲಕ, ಬಾಲಕಿಯರು ಕ್ರಮವಾಗಿ 12 ವರ್ಷ ಮತ್ತು 14 ವರ್ಷ ವಯಸ್ಸಿನ ಒಳಗಿರಬೇಕು. ಹಾಗೂ 6 ಮತ್ತು 8ನೇ ತರಗತಿ ಪ್ರವೇಶ ಪಡೆಯಲು ಅರ್ಹರಾಗಿರಬೇಕು.

ಹಿರಿಯರ ವಿಭಾಗದ ಬಾಲಕರು 19 ವರ್ಷ ವಯಸ್ಸಿನ ಒಳಗಿರಬೇಕು ಬಾಲಕಿಯರು 18 ವರ್ಷ ಒಳಗಿರಬೇಕು ಮತ್ತು ವಿದ್ಯಾರ್ಥಿಗಳಾಗಿರಬೇಕು. ಅಲ್ಲದೆ ಕ್ರೀಡಾ ಶಾಲೆ, ಕ್ರೀಡಾ ನಿಲಯ ಆಯ್ಕೆಗೆ ಪ್ರತಿ ವಯಸ್ಸಿಗೆ ನಿಗದಿ ಪಡಿಸಿರುವ ಗುಣಾಂಕ ಮಟ್ಟ: ಪರೀಕ್ಷೆಗಳಿಗೆ ಒಳಪಡಬೇಕು ಮತ್ತು ಉತ್ತೀರ್ಣರಾಗಬೇಕು.

2. ಗ್ರಾಮೀಣ ಹಾಗೂ ಮಹಿಳಾ ಮತ್ತು ದಸರಾ ಕ್ರೀಡಾ ಕೂಟಗಳನ್ನು ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದ ವಯೋಮಿತಿಗನುಗುಣವಾಗಿ ಆಯ್ಕೆ ಮಾಡಲಾಗುವುದು.

ಮಾನ್ಯ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ವಿವಿಧ ಪಂದ್ಯಾವಳಿಗಳನ್ನು ಸಂಘಟಿಸಲು ಹಾಗೂ ವಿವಿಧ ಪಂದ್ಯಾವಳಿಗಳಲ್ಲಿ ರಾಜ್ಯ ತಂಡಗಳು ಭಾಗವಹಿಸಲು ಸಹಾಯಧನ ನೀಡಲಾಗುತ್ತಿದೆ. ಸರ್ಕಾರದಿಂದ ಅನುಮೋದಿತ ಅನುದಾನ ನಿಯಮಾವಳಿಯನ್ವಯ ಈ ಸಹಾಯಧನವನ್ನು ನೀಡಲಾಗುತ್ತಿದೆ. ಪ್ರಸ್ತುತ ಅನುದಾನ ನಿಮಾವಳಿಯನುಸಾರ ಅಂಗೀಕೃತ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಒದಗಿಸಲಾಗುತ್ತಿರುವ ಸಹಾಯಧನದ ವಿವರ ಈ ರೀತಿ ಇದೆ.

1.	ರಾಜ್ಯ ಮಟ್ಟದ ಪಂದ್ಯಾವಳಿ ನಡೆಸಲು ಗರಿಷ್ಟ	ರೂ. 5000.00
2.	ಫೆಡರೇಷನ್ ಕಪ್ ಪಂದ್ಯಾವಳಿ ನಡೆಸಲು ಗರಿಷ್ಟ	ರೂ. 10000.00
3.	ದಕ್ಷಿಣ ವಲಯ ಅಂತರ ವಲಯ ಪಂದ್ಯಾವಳಿಗಳನ್ನು ಸಂಘಟಿಸಲು	ರೂ. 15000.00
4.	ರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳನ್ನು ನಡೆಸಲು ಗರಿಷ್ಟ	ರೂ. 50,000.00

ರಾಷ್ಟ್ರದ ವಿವಿಧ ಭಾಗಗಳಲ್ಲಿ ನಡೆಯುವ ರಾಷ್ಟ್ರ ಮಟ್ಟದ: ದಕ್ಷಿಣವಲಯ:ಅಂತರ್‌ವಲಯ ಹಾಗೂ ಫೆಡರೇಷನ್ ಕಪ್ ಪಂದ್ಯಾವಳಿಗಳಲ್ಲಿ ನಮ್ಮ ರಾಜ್ಯ ತಂಡ ಭಾಗವಹಿಸಲು ಹಾಗೂ ಈ ಪಂದ್ಯಾವಳಿಗೆ ಪೂರ್ವಬಾವಿಯಾಗಿ ನಡೆಸಲಾಗುವ ತರಬೇತಿ ಶಿಬಿರಗಳಿಗೆ ಮತ್ತು ಅಂತರ್ ರಾಷ್ಟ್ರೀಯ ಮಟ್ಟದ: ಭಾರತದ ಹೊರಗೆ ನಡೆಯುವ ಟೆಸ್ಟ್ ಮ್ಯಾಚುಗಳಲ್ಲಿ ಕರ್ನಾಟಕ ಕ್ರೀಡಾ ಪಟುಗಳು ಭಾಗವಹಿಸಲು ಸಹಾಯ ಧನ ಸಹಾಯ ಒದಗಿಸಲಾಗುವುದು. ಅದರ ವಿವರ ಈ ರೀತಿ ಇದೆ.

ವಿವಿಧ ಪಂದ್ಯಾವಳಿಗಳಲ್ಲಿ ರಾಜ್ಯ ತಂಡವು ಭಾಗವಹಿಸಲು

1. ಎರಡನೇ ದರ್ಜೆಯ ರೈಲ್ವೆ ಪ್ರಯಾಣ ದರ-ಕ್ರೀಡಾಪಟುಗಳು ತರಬೇತುದಾರರು ಮತ್ತು ವ್ಯವಸ್ಥಾಪಕರನೊಳಗೊಂಡ ತಂಡಕ್ಕೆ

ರಾಷ್ಟ್ರ ಮಟ್ಟದ ಪಂದ್ಯಾವಳಿ

1. ಪಂದ್ಯಾವಳಿಯ ಅವಧಿ ಹಾಗೂ ಪ್ರಯಾಣ ದರಗಳಿಗೆ ದಿನಭತ್ಯೆ
ರೂ. 50.00 ದಿನವೊಂದಕ್ಕೆ ಹಿರಿಯರಿಗೆ

ರೂ. 40.00 ದಿನವೊಂದಕ್ಕೆ ಕಿರಿಯರಿಗೆ ಮತ್ತು ಅತೀ ಕಿರಿಯರಿಗೆ)

ಅಂತರವಲಯ ದಕ್ಷಿಣ ವಲಯ ಮತ್ತು ಫೆಡರೇಷನ್ ಕಪ್ ಪಂದ್ಯಾವಳಿಗೆ

ಪಂದ್ಯಾವಳಿಯ ಅವಧಿ ಹಾಗೂ ರೂ. 40.00 ದಿನವೊಂದಕ್ಕೆ (ಹಿರಿಯರಿಗೆ)

ಪ್ರಯಾಣದ ದಿನಗಳಿಗೆ ದಿನಭತ್ಯೆ ರೂ. 35.00 ದಿನವೊಂದಕ್ಕೆ (ಕಿರಿಯರಿಗೆ)

4. ಕಿಟ್ ಅಲೋಯನ್ಸ್ ರೂ. 100.00 ಪ್ರತೀ ಕ್ರೀಡಾಪಟುಗಳಿಗೆ.
5. ವೈದ್ಯಕೀಯ ಸಾರಿಗೆ, ಪ್ರವೇಶ ಶುಲ್ಕ ಹಾಗೂ ಛಾಯಾ ಚಿತ್ರಗಳಿಗೆ ವಾಸ್ತವಿಕ ಖರ್ಚು ನೀಡಲಾಗುವುದು.

ಮೇಲ್ಕಂಡ ಪಂದ್ಯಾವಳಿಗಳಲ್ಲಿ ಭಾಗವಹಿಸುವ ರಾಜ್ಯ ತಂಡಗಳಿಗೆ ಪೂರ್ವಭಾವಿ ತರಬೇತಿ ಶಿಬಿರಗಳನ್ನು ನಡೆಸಲಾಗುವುದು ಮತ್ತು ಇದಕ್ಕಾಗಿ ಒದಗಿಸಲಾಗುವ ಧನ ಸಹಾಯ ವಿವರಗಳು ಈ ರೀತಿ ಇವೆ.

1. ತರಬೇತುದಾರರು ಮತ್ತು ಕ್ರೀಡಾ ಪಟುಗಳಿಗೆ ಅವರ ನಿವಾಸಸ್ಥಳದಿಂದ ತರಬೇತಿ ಶಿಬಿರ ನಡೆಯುವ ಸ್ಥಳ ಮತ್ತು ಹಿಂದಕ್ಕೆ ಹೋಗಲು ಎರಡನೇ ದರ್ಜೆ ರೈಲ್ವೆ ಪ್ರಯಾಣದ ದರ.
2. ರೆಸಿಡೆನ್ಸಿಯಲ್ ತರಬೇತಿ ಶಿಬಿರದಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ದಿನವೊಂದಕ್ಕೆ ರೂ. 40.00 ರಂತೆ ದಿನಭತ್ಯೆ ಮತ್ತು ನಾನ್-ರೆಸಿಡೆನ್ಸಿಯಲ್ ಶಿಬಿರದಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ದಿನವೊಂದಕ್ಕೆ ರೂ. 20.00 ರಂತೆ ತರಬೇತಿ ಶಿಬಿರ ನಡೆಯುವ ಅವಧಿಗೆ ನೀಡಲಾಗುವುದು.
3. ತರಬೇತುದಾರರಿಗೆ ಪರಿಶ್ರಮ ಧನ ರೂ. 25.00 ದಿನವೊಂದಕ್ಕೆ ನೀಡಲಾಗುವುದು.
4. ಕ್ರೀಡೋಪಕರಣ ಆಟದ ಮೈದಾನದ ಸಜ್ಜು, ಪ್ರಮಾಣ ಪತ್ರಗಳು ಅವುಗಳ ವಾಸ್ತವ ಖರ್ಚುಗಳನ್ನು ನೀಡಲಾಗುವುದು.

ಅಂತರ್ ರಾಷ್ಟ್ರೀಯ ಪಂದ್ಯಾವಳಿಗಳು ಭಾರತದ ಹೊರಗಡೆ ನಡೆಯುವ ಟೆಸ್ಟು ಮ್ಯಾಚುಗಳಲ್ಲಿ ಭಾಗವಹಿಸುವ ಕರ್ನಾಟಕ ಕ್ರೀಡಾಪಟುಗಳಿಗೆ ನೀಡಲಾಗುವ ಸಹಾಯ ಧನದ ವಿವರ ಈ ರೀತಿ ಇದೆ (ಭಾರತ ಸರ್ಕಾರವು ವೆಚ್ಚವನ್ನು ಬರಿಸದೇ ಇರುವ ಪ್ರಸಂಗಗಳಲ್ಲಿ ಮಾತ್ರ).

1. ಹಡಗು: ವಿಮಾನ ಹತ್ತುವ ಸ್ಥಳದವರೆಗೆ ಮೊದಲನೆ ದರ್ಜೆ ರೈಲು ಪ್ರಯಾಣ ದರ ನೀಡಲಾಗುವುದು.
2. ಹಡಗು: ವಿಮಾನದ ವಾಸ್ತವ ದರ ನೀಡಲಾಗುವುದು.
3. ಭಾರತದೊಳಗೆ ಪ್ರಯಾಣಿಸುವಾಗ ದಿನವೊಂದಕ್ಕೆ ರೂ. 16.00 ರಂತೆ ಪ್ರಾಸಂಗಿಕ ವೆಚ್ಚ ನೀಡಲಾಗುವುದು.
4. ವಿಮಾನ ನಿಲ್ದಾಣ ಶುಲ್ಕ
5. ಅಂತರ್ ರಾಷ್ಟ್ರೀಯ ಪಂದ್ಯಾವಳಿಗಳನ್ನು ಸಂಘಟಿಸುವ ಸಮಿತಿಯು ನಿರ್ಧರಿಸಿದಂತೆ, ಭೋಜನ : ವಸತಿ ದರ ನೀಡಲಾಗುವುದು.
6. ರಾಷ್ಟ್ರೀಯ ಫೆಡರೇಷನ್‌ಗಳು ನಿರ್ಧರಿಸುವ ಕಿಟ್ ಅಲೋಯನ್ಸ್ ನೀಡಲಾಗುವುದು.

ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರ (ಕರ್ನಾಟಕ ಕ್ರೀಡಾ ಪ್ರಾಧಿಕಾರ)ರಲ್ಲಿ ಮಾನ್ಯತೆ ಹಾಗೂ ಸಹಾಯಧನ ಪಡೆಯಲು, ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಈ ಕೆಳಕಂಡ ಅರ್ಹತೆಗಳಿರಬೇಕಾಗಿದೆ:-

1. ಮಾನ್ಯತೆ ಪಡೆಯಲು ಅರ್ಜಿ ಸಲ್ಲಿಸುವ ದಿನಾಂಕದಿಂದ ಒಂದು ವರ್ಷದ ಹಿಂದೆಯೇ ರಾಜ್ಯ ಕ್ರೀಡಾ ಸಂಸ್ಥೆಗಳು ಸ್ಥಾಪಿತವಾಗಿರಬೇಕು.
2. 1960ರ ಸಂಘ ಸಂಸ್ಥೆ ನೊಂದಣಿ ಅಧಿನಿಯಮದನುಸಾರ ನೊಂದಾಣಿಗೊಂಡಿರಬೇಕು.
3. ಪ್ರತೀ ಕ್ರೀಡೆಯಲ್ಲೂ, ಸಂಬಂಧಿಸಿದ ರಾಷ್ಟ್ರೀಯ ಫೆಡರೇಷನಗಳಿಂದ ಅಂಗೀಕೃತವಾದ ರಾಜ್ಯ ಕ್ರೀಡಾ ಸಂಸ್ಥೆಗಳು ಮಾತ್ರ ಮಾನ್ಯತೆ ಪಡೆಯಲು ಅರ್ಹರಾಗಿರುತ್ತವೆ.
4. ಭಾರತ ಸರ್ಕಾರ, ರಾಜ್ಯ ಸರ್ಕಾರ, ಕರ್ನಾಟಕ ಕ್ರೀಡಾ ಪ್ರಾಧಿಕಾರ (ಕ.ಕ್ರೀ.ಪ್ರಾ) ಹೊರಡಿಸುವ ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
5. ಉದ್ದೇಶಿತ ಕಾರಣಗಳಿಗಾಗಿ ನೀಡಲಾಗುವ ಸಹಾಯಧನವನ್ನು ಉಪಯೋಗಿಸಿಕೊಳ್ಳಲು ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರ (ಕ.ಕ್ರೀ.ಪ್ರಾ) ಸೂಚಿಸುವ ನಿಯಮಗಳನ್ನು ಅನುಸರಿಸಲು ರಾಜ್ಯ ಕ್ರೀಡಾ ಸಂಸ್ಥೆಗಳು ಸಮ್ಮತಿಸಬೇಕು.

ವಿಷಯ:- ಮಾಗಡಿಗೆ ತಾಲ್ಲೂಕು ಮಟ್ಟದ ಕ್ರೀಡಾಂಗಣ.

107(363)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-